ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದ ಆಗಿರತಕ್ಕ ತೊಂದರೆ ಬಗ್ಗೆ

೧೨೦. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).— ಮಾನ್ಯ ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿದ್ಯುತ್ ಕೊರತೆಯು ಪ್ರಮಾಣವೆಷ್ಟು ?

ಆ) ಈ ಕೊರತೆಯಿಂದ ರಾಜ್ಯದಲ್ಲಿ ವಿದ್ಯುತ್ ಕಡಿತವನ್ನು ಪ್ರತಿನಿತ್ಯವೂ ಜಾರಿಗೆ ತರಲಾಗಿದೆಯೇ?

ಇ) ಹಾಗಿದ್ದಲ್ಲಿ ಈಗ ಪರೀಕ್ಷಾ ಸಮಯವಾಗಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಈ ಕೊರತೆಯನ್ನು ನೀಗಲು ತಾತ್ಕಾಲಿಕ ಕ್ರಮಗಳನ್ನೇನಾದರೂ ಸರ್ಕಾರವು ಕೈಗೊಂಡಿದೆಯೇ ?

ಜಿ. ಪುಟ್ಟಸ್ವಾಮಿಗೌಡ(ನೀರಾವರಿ ಮತ್ತು ಲೋಕೋಪಯೋಗಿ ಮತ್ತು ಇಂಧನ ಸಚಿವರು).—

ಅ) ದಿನವೊಂದಕ್ಕೆ ಸುಮಾರು ೧೦.೩ ದಶಲಕ್ಷ ಯೂನಿಟ್‌ಗಳು.

ಆ) ಹೌದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನನಗೆ ಮಾನ್ಯ ಸಚಿವರ ಉತ್ತರ ಅರ್ಥವಾಗುತ್ತಿಲ್ಲ.

ಶ್ರೀ ಆರ್. ಎನ್. ನಾಯಕ್ —ಅಧ್ಯಕ್ಷರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಿಮಗೆ ಅರ್ಥವಾಗುವುದಿಲ್ಲ. ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ನನಗೆ ಜೀವನದಲ್ಲಿ ಒಂದು ಸಂತೋಷ ಇದೆ.

ಶ್ರೀ ಪಿ ಜಿ.ಆರ್. ಸಿಂಧ್ಯ.—ನನಗೆ ಗೊತ್ತಿದೆ ಕುಳಿತುಕೊಳ್ಳಿ. ನೀವು ಏನು ಕೇಳುತ್ತಿದ್ದೀರಿ, ನಿಮ್ಮ ಯೋಗ್ಯತೆ ಏನು ಎಂದು ನನಗೆ ಚೆನ್ನಾಗಿ ಗೊತ್ತಿದೆ. ಅದನ್ನು ಹೇಳುವುದಕ್ಕೆ ನಾಚಿಕೆ ಯಾಗುತ್ತದೆ.

ಶ್ರೀ ಆರ್. ಎನ್. ನಾಯಕ್ —ನೀವು ಒಂದು ನಿಮಿಷಕ್ಕೆ ಖಾಲಿಯಾದಿರಿ. ಈಗ ನೀವು ಆ ಕಡೆ ಇದ್ದೀರಿ ಎಂಬುದನ್ನು ತಿಳಿದುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ —ನಾನು ಈ ಕಡೆಯೇ ಕುಳಿತ್ತಿದ್ದೇನೆ. ನಿಮ್ಮ ಹಾಗೆ ಆ ಕಡೆ ಹೋಗುವುದಕ್ಕೆ ಪ್ರಯತ್ನ ಮಾಡಿ ಆ ಕಡೆ ಹೋಗಲಿಲ್ಲ. ನೀವು ಒಬ್ಬರೆ ಡಿಫೆಕ್ಟರ್, ಸುಮ್ಮನೆ ಕುಳಿತುಕೊಳ್ಳಿ.

ಈಗ ಪರೀಕ್ಷೆಗಳು ನಡೆಯುತ್ತಿವೆ, ಪವರ್ ಕಟ್ ಆಗುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಏನು ಹೇಳುವುದು? ಅಧಿಕಾರಿಗಳು ಬರೆದಿರತಕ್ಕ ಉತ್ತರವನ್ನು ಮಾನ್ಯ ಸಚಿವರು ಓದುತ್ತಿದ್ದಾರೆಂದು ತಿಳಿದು ಕೊಂಡಿದ್ದೇನೆ. ಇದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಬಿ.ಇ. ಎಂಬಿ.ಬಿ.ಎಸ್. ಎಂಟ್ರೆನ್ಸ್ ಟೆಸ್ಟ್ ಬರುತ್ತದೆ. ಕೆ.ಇ.ಬಿ. ಯಾವ ಸ್ಥಿತಿಗೆ ಬಂದಿದೆ ಎಂದರೆ ನ್ಯೂಸ್ ಐಟಂ ಕೇಳುತ್ತಿದ್ದರೆ ಪವರ್ ಹೋಗುತ್ತದೆ ಭಾನುವಾರ ಕಷ್ಟಪಟ್ಟು ಎಲ್ಲ ಕಾರ್ಯಕ್ರಮಗಳನ್ನು ಕ್ಯಾನ್ಸಲ್ ಮಾಡಿ ಮಹಾಭಾರತ ನೋಡಬೆ ಕೆಂದರೆ ಪವರ್ ಇರುವುದಿಲ್ಲ. ಕೆ.ಇ.ಬಿ. ಯಾವ ರೀತಿ ಪಂಕ್ಷನ್ ಆಗುತ್ತಿದೆ ಎಂದು ಅರ್ಥವಾಗುತ್ತಿಲ್ಲ. ಕಳೆದ ಮೂರು ಅಧಿವೇಶನದಿಂದ ಈ ಕಡೆ ಮತ್ತು ಆ ಕಡೆ ಸದಸ್ಯರು ಇದನ್ನು ಹೇಳುತ್ತಲೇ ಇದ್ದಾರೆ. ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆ ಬಂದಿದೆ. ಬೆಳಿಗಿನ ಜಾವ ೭ ಗಂಟೆಯವರೆಗಾದರೂ ಯಾವುದೇ ಡಿಸ್ಟರ್ಬೆನ್ಸ್ ಇಲ್ಲದೆ ಪವರ್ ಸಪ್ಲೈ ಮಾಡಬೇಕೆಂದು ಹೇಳಿದಾಗ ರಾಜಶೇಖರ ಮೂರ್ತಿಯವರು ಪರಿಶೀಲನೆ ಮಾಡುತ್ತೇವೆಂದರು. ಈ ಸಾರಿ ಪುಟ್ಟಸ್ವಾಮಿಗೌಡರು ಉತ್ತರ ಹೇಳುತ್ತಿದ್ದಾರೆ ಮತ್ತೆ ಯೇ ತಿಂಗಳಲ್ಲಿ ಅಧಿವೇಶನ ಸೇರಿದಾಗ ಯಾರು ಉತ್ತರಿಸುತ್ತಾರೋ ಗೊತ್ತಿಲ್ಲ ಸಾಮಾನ್ಯವಾಗಿ ಮಹಾಭಾರತವನ್ನು ನಾವು ಮಾತ್ರವಲ್ಲ, ಲಕ್ಷಾಂತರ ಜನರು ನೋಡಬೇಕೆಂದಿರುತ್ತಾರೆ ಆದರೆ ಆ ಅವಧಿಯಲ್ಲಿ ಪವರ್ ಹೋಗುತ್ತದೆ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಸಂಬಂಧಪಟ ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ರಾಜ್ಯದಲ್ಲಿ ೧೦.೩ ದಶಲಕ್ಷ ಯೂನಿಟ್ಸ್ ವಿದ್ಯುತ್ ಕೊರತೆ ಇದೆ. ಇದನ್ನು ನಿವಾರಿಸುವುದಕ್ಕೆ ಈಗಾಗಲೇ ಸರ್ಕಾರ ಈ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

೧. ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಿಗ್ಗೆ ೬ ರಿಂದ ೯ ಗಂಟೆಯವರೆಗೆ ಮತ್ತು ಮಧ್ಯಾಹ್ನ ೩ ರಿಂದ ೬ ಗಂಟೆಯವರೆಗೆ ನಿಯಮಿತ ಲೋಡ್ ಷೆಡಿಂಗ್ ಮಾಡುವುದು.

೨. ಬೆಂಗಳೂರು ಸೇರಿದಂತೆ ನಗರ ಪ್ರದೇಶಗಳಲ್ಲಿ ಬೆಳಿಗಿನ ವೇಳೆ ಪೀಕ್‌ಲೋಡ್ ಷೆಡಿಂಗ್ ೪೫ ನಿಮಿಷ ಮತ್ತು ಸಾಯಂಕಾಲ ೪೫ ನಿಮಿಷ ಪೀಕ್‌ಲೋಡ್ ಷೆಡಿಂಗ್ ಮಾಡುವುದು.

೩. ತುರ್ತು ಸಂದರ್ಭಗಳಲ್ಲಿ ಸಮಗ್ರ ಪವರ್ ಸಿಸ್ಟಂ ಅನ್ನು ತಪ್ಪಿಸಲು ಕನಿಷ್ಠ ಅವಧಿಯವರೆಗೆ ಅನಿಯಮಿತ ಲೋಡ್ ಷೆಡ್ಡಿಂಗ್ ಮಾಡಲಾಗುವುದು.

ಇದು ಅನಿವಾರ್ಯ.

೧೨. ಪಿ.ಎಂ.

ಸ್ವಾಮಿ, ಈಗ ಗ್ರಾಮಾಂತರ ಪ್ರದೇಶದಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಬೆಳಿಗಿನ ಜಾವ ವಿದ್ಯುತ್ ಕಡಿತ ಆಗುತ್ತಾ ಇರುವುದರಿಂದ ಅವರ ವ್ಯಾಸಂಗಕ್ಕೆ ತೊಂದರೆಯಾಗುವುದಿಲ್ಲ ಪಟ್ಟಣಗಳಲ್ಲಿ, ಬೆಂಗಳೂರಂತ ನಗರದಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಕೇವಲ ೩೦ ನಿಮಿಷಗಳ ಕಾಲ ತೊಂದರೆಯಾಗುತ್ತದೆ. ಇದರಿಂದ ಹೆಚ್ಚು ಅನಾನುಕೂಲ ಆಗುವುದಿಲ್ಲ ಎಂದು ನಾನು ಭಾವನೆ ಮಾಡಿದ್ದೇನೆ. ಇದರ ಬಗ್ಗೆ ಯಾವ ವಿಧಾನಸಭೆಗಳು ಸರ್ಕಾರಕ್ಕಾಗಲಿ, ಬೋರ್ಡಿಗಾಗಲೀ ಬಂದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಅನಿವಾರ್ಯ. ಇದನ್ನು ಮಾಡದೇಹೋದರೆ ವಿದ್ಯುತ್ ಕೊರತೆ ತುಂಬುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಮತ್ತೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದು ಸರ್ಕಾರಕ್ಕೆ ಗೊತ್ತಿದೆ ಎಂದು ಹೇಳಿ. ಮಾಡುವುದು ಬಿಡುವುದು ನಿಮಗೆ ಸಂಬಂಧಪಟ್ಟಿದ್ದು. ನಾವು ಮಾಡದೇ ಇರುವುದಕ್ಕೆ ಈ ಕಡೆ ಬಂದಿದ್ದೇವೆ. ನೀವೂ ಮಾಡದಿದ್ದರೆ ನೀವೂ ಈ ಕಡೆ ಬರುತ್ತೀರಿ. ನೀವು ಪವರ್ ಕೊಡುವುದಕ್ಕಾಗುವುದಿಲ್ಲ ಎನ್ನುವ ಸಮಯದಲ್ಲಿ ಕೊಡ ಬೇಕಾಗಿಲ್ಲ. ಆದರೆ ಯಾವ ಸಂದರ್ಭದಲ್ಲಿ ಕೊಡುತ್ತೇವೆ ಎಂದು ಹೇಳುತ್ತೀರಿ, ಆ ಸಂದರ್ಭದಲ್ಲಿ ಡಿಸ್ಟರ್ಬೆನ್ಸ್ ಆಗಬಾರದು. ಅದಕ್ಕೆ ಕಾರ್ಯಕ್ರಮ ಹಾಕಿ

ಶ್ರೀ ಎಂ. ಪಿ. ವೆಂಕಟೇಶ್.—ಗ್ರಾಮಾಂತರ ಪ್ರದೇಶದಲ್ಲಿ ತೊಂದರೆಯಾಗುವುದಿಲ್ಲ ಎಂದು...

ಅಧ್ಯಕ್ಷರು.—ಅವರು ಪ್ರಶ್ನೆ ಕೇಳಿರತಕ್ಕದ್ದು ಮಂತ್ರಿಗಳನ್ನು. ನೀವು ಉತ್ತರ ಹೇಳುತ್ತೀರಾ? ಮಂತ್ರಿಗಳು ಹೇಳಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—೩೦ ನಿಮಿಷಗಳ ಕಾಲ ಮಾತ್ರ ರಾತ್ರಿ ವೇಳೆ ಪಟ್ಟಣಗಳಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗಬಹುದೆಂದು ಹೇಳಿರುವುದನ್ನು ಗಮನಿಸಿದ್ದೇವೆ. ಆದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ೨೨೯ ಪಟ್ಟಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.